# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 233

ಸದಸ್ಯರ ಹೆಸರು : ಶ್ರೀ ಕೆ.ಎಸ್. ನವೀನ್
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 06.12.2023

ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

| ಪ್ರಶ್ನೆ | ಉತ್ತರ |
|---|---|
| (ಅ) ರಾಜ್ಯದಲ್ಲಿ ಮಳೆಯ ಕೊರತೆಯಿಂದಾಗಿ ಬರಗಾಲ ಎದುರಿಸುತ್ತಿರುವ ತಾಲ್ಲೂಕುಗಳಲ್ಲಿ ಕಂದಾಯ ಇಲಾಖೆಯ ಮೂಲಕ ಬರ ಪರಿಹಾರ ಮತ್ತು ಮೇವು ಇತ್ಯಾದಿಗಳಿಗೆ ಬಿಡುಗಡೆ ಮಾಡಿದ ಮೊತ್ತವೆಷ್ಟು; (ಜಿಲ್ಲಾವಾರು ಮಾಹಿತಿಯನ್ನು ನೀಡುವುದು) | ಮುಂದಿನ ದಿನಗಳಲ್ಲಿ ತುರ್ತು ಕುಡಿಯುವ ನೀರು ಪೂರೈಕೆ ಹಾಗೂ ಜಾನುವಾರು ಸಂರಕ್ಷಣೆಗಾಗಿ ಗೋಶಾಲೆ ಹಾಗೂ ಮೇವಿನ ಬ್ಯಾಂಕ್ ನಿರ್ವಹಣೆಗಾಗಿ ಪ್ರಕೃತಿ ವಿಕೋಪ ಪರಿಹಾರ ನಿಧಿ (SDRF)ರಡಿ ಒಟ್ಟು ರೂ.324.00ಕೋಟಿಗಳನ್ನು ದಿನಾಂಕ:31-10-2023ರ ಸರ್ಕಾರಿ ಆದೇಶದನ್ವಯ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ(ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1** ರಲ್ಲಿ ಒದಗಿಸಿದೆ). |
| (ಆ) ರಾಜ್ಯ ಉತ್ಪತ್ತಿ ನಿರ್ಮಾಣ ನಿಧಿ ಅಡಿಯಲ್ಲಿ ಬರ ನಿರ್ವಹಣೆಗೋಸ್ಕರ ರಾಜ್ಯ ಸರ್ಕಾರ ಈ ಸಾಲಿನ ಬರಗಾಲಕ್ಕಾಗಿ ಮೀಸಲು ಇರಿಸಿ ಬರ ಪರಿಹಾರವನ್ನು ಕೈಗೆತ್ತಿಕೊಂಡ ಕಾಮಗಾರಿಗಳು ಎಷ್ಟು; ಜಿಲ್ಲಾವಾರು ಸಂಖ್ಯೆ ಮತ್ತು ಕೆಲಸಗಳ ಮೌಲ್ಯಗಳ ಸಮೇತವಾಗಿ ಮಾಹಿತಿ ನೀಡುವುದು? | ಜಿಲ್ಲಾಧಿಕಾರಿಗಳ SDRF ಪಿ.ಡಿ. ಖಾತೆಯಲ್ಲಿ ದಿನಾಂಕ 27.11.2023 ರ ಅಂತ್ಯಕ್ಕೆ ರೂ.775.83 ಕೋಟಿ ಅನುದಾನ ಲಭ್ಯವಿದ್ದು, ಜಿಲ್ಲಾವಾರು ವಿವರವನ್ನು **ಅನುಬಂಧ-2**ರಲ್ಲಿ ಒದಗಿಸಿದೆ. ಹಾಗೂ ತಹಶೀಲ್ದಾರರ ಪಿಡಿ ಖಾತೆಗಳಲ್ಲಿ ಒಟ್ಟು ರೂ.119.28 ಕೋಟಿಗಳ ಅನುದಾನ ಲಭ್ಯವಿರುತ್ತದೆ.<br><br>ಹಸಿರು ಮೇವು ಬೆಳೆಯುವ ಸಲುವಾಗಿ ರೈತರಿಗೆ ಉಚಿತವಾಗಿ ಮೇವಿನ ಬೀಜದ ಮಿನಿ ಕಿಟ್ (Fodder Mini Kit) ಖರೀದಿಸಲು ರೂ.20.00ಕೋಟಿಗಳನ್ನು ಪಶುಸಂಗೋಪನೆ ಇಲಾಖೆಗೆ ಬಿಡುಗಡೆಗೊಳಿಸಲಾಗಿದೆ.<br><br>ಕೇಂದ್ರ ಸರ್ಕಾರದ ಕೃಷಿ ಮಂತ್ರಾಲಯ ಬರ ನಿರ್ವಹಣೆ ಕೈಪಿಡಿ-2020ರನ್ವಯ ವಿವಿಧ ಅವಧಿಯ ಹವಮಾನ ಪರಿಸ್ಥಿತಿ ಅನುಗುಣವಾಗಿ ಒಟ್ಟಾರೆ ರಾಜ್ಯದ 236 ತಾಲ್ಲೂಕುಗಳ ಪೈಕಿ 223 ತಾಲ್ಲೂಕುಗಳನ್ನು (196 ತೀವ್ರ ಬರ & 27 ಸಾಧರಣ ಬರ) ಬರ ಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ. ಈ ಸಂಬಂಧ ಕೇಂದ್ರ ಸರ್ಕಾರದ SDRF/NDRF ಮಾರ್ಗಸೂಚಿಯನುಸಾರ NDRFರಡಿ ರೂ.18171.44 ಕೋಟಿಗಳ ಆರ್ಥಿಕ ನೆರವನ್ನು ಕೋರಿ ಮೆಮೋರಾಂಡಂ ಸಲ್ಲಿಸಿದ್ದು, ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ.<br><br>ಬರ ಪರಿಸ್ಥಿತಿಯ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರದಿಂದ NDRF ಅನುದಾನವನ್ನು ನಿರೀಕ್ಷಿಸಿ SDRF/NDRF ಮಾರ್ಗಸೋಚಿಗಳ ಪ್ರಕಾರ ಬೆಳೆ ಹಾನಿ ಪರಿಹಾರದ ಮೊದಲನೆ ಕಂತಾಗಿ/ ಬೆಳೆ ಹಾನಿ ಪರಿಹಾರವಾಗಿ ಅರ್ಹತೆಯ ಅನುಗೋಣವಾಗಿ ರೂ.2,000/- ರವರೆಗೆ ರೈತರಿಗೆ ಪಾವತಿಲು ತೀರ್ಮಾನಿಸಿದೆ. |

ಕಡತ ಸಂಖ್ಯೆ:ಕಂಇ 533 ಟಿಎನ್‌ಆರ್ 2023

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

ವಿ.ಪ. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 233

**ಅನುಬಂಧ-1**

## ಬರ ನಿರ್ವಹಣೆಗಾಗಿ ಪ್ರಕೃತಿ ವಿಕೋಪ ಪರಿಹಾರ ನಿಧಿ (SDRF) ರಡಿ ರಾಜ್ಯದ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ದಿನಾಂಕ 31.10.2023 ರಂದು ಬಿಡುಗಡೆ ಮಾಡಲಾಗಿರುವ ಅನುದಾನದ ವಿವರ

(ರೂ ಲಕ್ಷಗಳಲ್ಲಿ)

| ಕ್ರ. ಸಂ. | ಜಿಲ್ಲೆ | ಬಿಡುಗಡೆಗೊಳಿಸಲಾದ ಅನುದಾನ |
|---|---|---|
| 1 | ಬೆಂಗಳೂರು ಗ್ರಾಮಾಂತರ | 750.00 |
| 2 | ಬೆಂಗಳೂರು ನಗರ | 600.00 |
| 3 | ಕೊಪ್ಪಳ | 1050.00 |
| 4 | ಗದಗ | 1050.00 |
| 5 | ಚಿಕ್ಕಬಳ್ಳಾಪುರ | 900.00 |
| 6 | ಬೆಳಗಾವಿ | 2250.00 |
| 7 | ಬಾಗಲಕೋಟೆ | 1350.00 |
| 8 | ಯಾದಗಿರಿ | 900.00 |
| 9 | ಬಳ್ಳಾರಿ | 750.00 |
| 10 | ರಾಯಚೂರು | 900.00 |
| 11 | ಶಿವಮೊಗ್ಗ | 1050.00 |
| 12 | ಬೀದರ್ | 450.00 |
| 13 | ವಿಜಯಪುರ (ಬಿಜಾಪುರ) | 1800.00 |
| 14 | ಚಾಮರಾಜನಗರ | 750.00 |
| 15 | ಚಿಕ್ಕಮಗಳೂರು | 1200.00 |
| 16 | ಚಿತ್ರದುರ್ಗ | 900.00 |
| 17 | ದಕ್ಷಿಣ ಕನ್ನಡ | 300.00 |
| 18 | ದಾವಣಗೆರೆ | 900.00 |
| 19 | ಕಲಬುರಗಿ | 1650.00 |
| 20 | ಹಾಸನ | 1200.00 |
| 21 | ಹಾವೇರಿ | 1200.00 |
| 22 | ಕೊಡಗು | 750.00 |
| 23 | ಕೋಲಾರ | 900.00 |
| 24 | ಮಂಡ್ಯ | 1050.00 |
| 25 | ಮೈಸೂರು | 1350.00 |
| 26 | ರಾಮನಗರ | 750.00 |
| 27 | ತುಮಕೂರು | 1500.00 |
| 28 | ಉತ್ತರ ಕನ್ನಡ | 1650.00 |
| 29 | ಧಾರವಾಡ | 1200.00 |
| 30 | ಉಡುಪಿ | 450.00 |
| 31 | ವಿಜಯನಗರ | 900.00 |
| ಒಟ್ಟು | | **32400.00** |